# ಬ್ರಹ್ಮಜ್ಞಾನಿ ಮಧುರಾದಾಸ

ಕುಮಾರಿ. ಪಿ. ಉಷಾ

*ಎಲ್ಲ ಬಂಧನಗಳನ್ನೂ ಕಿತ್ತೊಗೆದು ಸಚ್ಚಿದಾನಂದ ಸಾಗರದಲ್ಲಿ ಮಿಂದು ಅತ್ಯಂತ ಸರಳವಾದ ಬದುಕನ್ನು ಬಾಳಿದ ಬ್ರಹ್ಮಜ್ಞಾನಿ ಮಧುರಾದಾಸರ ಸೂಕ್ಷ್ಮ ಪರಿಚಯವನ್ನು ಮಾಡಿಕೊಟ್ಟಿರುವ ಕುಮಾರಿ ಪಿ. ಉಷಾ ಅವರು ಕಾಶಿಯಲ್ಲಿರುವ ಶ್ರೀರಾಮಕೃಷ್ಣ ಸೇವಾಶ್ರಮದಲ್ಲಿ ಸೇವೆ ಸಲ್ಲಿಸುತ್ತಿರುವರು.*

ಶ್ರೀರಾಮಕೃಷ್ಣರು ಬ್ರಹ್ಮಜ್ಞಾನಿಗಳ ಬಗ್ಗೆ ಈ ರೀತಿ ಹೇಳುತ್ತಿದ್ದರು, "ಬ್ರಹ್ಮವನ್ನರಿತವನು ಕೆಲವೊಮ್ಮೆ ಹುಚ್ಚನಂತೆಯೂ ಕೆಲವೊಮ್ಮೆ ಮಗುವಿನಂತೆಯೂ ಕೆಲವೊಮ್ಮೆ ಪಿಶಾಚಿಯಂತೆಯೂ ವರ್ತಿಸುತ್ತಾನೆ. ಮತ್ತೆ ಕೆಲವು ಸಲ ಅವನು ಜಡವಸ್ತುವಿನಂತೆಯೂ ಇರುತ್ತಾನೆ" ಎಂದು. ಸ್ವಾಮಿ ವಿವೇಕಾನಂದರ ನೇರ ಶಿಷ್ಯರಾದ ಸ್ವಾಮಿ ಕಲ್ಯಾಣಾನಂದರು ಹರಿದ್ವಾರದ ಕಂಖಲ್ ರಾಮಕೃಷ್ಣ ಸೇವಾಶ್ರಮದಲ್ಲಿದ್ದಾಗ, ಪಂಜಾಬಿ ಸಾಧುಗಳೊಬ್ಬರು ಸೇವಾಶ್ರಮಕ್ಕೆ ಆಗಾಗ ಭೇಟಿಕೊಡುತ್ತಿದ್ದುದುಂಟು. ಅದ್ವೈತದ ಅತಿ ಉನ್ನತ ಸ್ತರಕ್ಕೆ ಏರಿದ್ದ ಅವರ ಹೆಸರು ಮಧುರಾದಾಸ ಎಂದು. ಇವರು ಬ್ರಹ್ಮವನ್ನರಿತ ಮಹಾತ್ಮರೆಂದು ಅನೇಕರು ತಿಳಿದಿದ್ದರು.

ಪಂಜಾಬಿನ ಹೋಷಿಯಾರಪುರ ಎಂಬ ಊರಿನಲ್ಲಿ ಸಾರಸ್ವತ ಬ್ರಾಹ್ಮಣ ದಂಪತಿಗಳಿಗೆ ಜನಿಸಿದ ಪುತ್ರನ ಜಾತಕವು ಇವನು ಹೆಚ್ಚುಕಾಲ ಮನೆಯಲ್ಲಿರುವುದಿಲ್ಲ ಎಂದು ಹೇಳಿತ್ತು. ಬಾಲಕನಾಗಿದ್ದಾಗ ಇವನ ಮೈಮೇಲೆ ಬಟ್ಟೆಯೇ ನಿಲ್ಲುತ್ತಿರಲಿಲ್ಲ; ಹೊರಗೆ ಹೋದನೆಂದರೆ ತೊಟ್ಟ ಉಡುಗೆ ಕಳಚಿ ಹೋಗುತ್ತಿತ್ತು. ಬೆತ್ತಲಾಗಿ ಮನೆಗೆ ಹಿಂದಿರುಗಿದಾಗ ತಾಯಿ ಒಮ್ಮೊಮ್ಮೆ ಕೋಪಗೊಂಡು ಹೊಡೆದರೂ ಹುಡುಗನಿಗೆ ಮಾತ್ರ ಕೋಪವಾಗಲಿ, ದುಃಖವಾಗಲಿ ಆಗುತ್ತಿರಲಿಲ್ಲ. ಸ್ವಲ್ಪ ಸಮಯದ ಬಳಿಕ ಸಮಾಧಾನಗೊಂಡ ತಾಯಿ ಇವನ ಕೈಯಲ್ಲಿ ಮಿಠಾಯಿಯಿತ್ತರೆ ಹುಡುಗನ ಸ್ನೇಹಿತರು ಇವನ ಕೈಯಿಂದ ಅದನ್ನು ಕಿತ್ತು ಕೊಂಡು ಬಿಡುತ್ತಿದ್ದರು. ಆಗಲೂ ಮಧುರಾದಾಸನಿಗೆ ಯಾವ ವ್ಯಥೆಯೂ ಇಲ್ಲ; ಅಳುವಂತೂ ಅವನಿಗೆ ಬಂದದ್ದೇ ಇಲ್ಲ! ಶಾಲೆಯ ಪಾಠಗಳಲ್ಲಿ ಮಧುರಾದಾಸನಿಗಿದ್ದ ಆಸಕ್ತಿ ಅಷ್ಟಕ್ಕಷ್ಟೆ. ಕೆಲವು ಸಲ ಪುಸ್ತಕಗಳನ್ನು, ಕೆಲವು ಸಲ ಬಟ್ಟೆಯನ್ನು ಕಳೆದುಕೊಂಡು ಮನೆಗೆ ಹಿಂದಿರುಗುತ್ತಿದ್ದನು. ಉಪನಯನವಾದ ಮೇಲೆ ಜನಿವಾರವೂ ಸಹ ಅವನ ಮೈಮೇಲಿರುತ್ತಿರಲಿಲ್ಲ!

ಮಧುರಾದಾಸನು ಹೆಚ್ಚು ಸಮಯ ಮನೆಯಲ್ಲಿರುವುದಿಲ್ಲ ಎಂದು ತಿಳಿದಿದ್ದ ಅವನ ತಾಯ್ತಂದೆಯರಿಗೆ ಹೇಗಾದರೂ ಮಾಡಿ ಅವನನ್ನು ತಮ್ಮೊಂದಿಗೆ ಉಳಿಸಿಕೊಳ್ಳಬೇಕೆಂಬ ಹಂಬಲ. ಊರಿನ ಹಿರಿಯರೊಡನೆ ವಿಚಾರಮಾಡಿ, ಎಂಟು ವರ್ಷದ ಬಾಲಕಿಯೊಬ್ಬಳೊಂದಿಗೆ ಅವನ ವಿವಾಹವಾಯಿತು. ಮಧುರಾದಾಸನಿಗೆ ಆಗ ಹನ್ನೊಂದು ವರ್ಷ ವಯಸ್ಸು. ಆಗಿನ ಸಂಪ್ರದಾಯದಂತೆ ಮದುವೆಯಾದ ಬಳಿಕ ಹುಡುಗಿಯು ಒಂದು ವರ್ಷಕ್ಕಾಗಿ ತನ್ನ ತಂದೆಯ ಮನೆಗೆ ಹಿಂದಿರುಗಿದಾಗ, ಮಧುರಾದಾಸನು ಮಾಡಿದ್ದು ಒಂದೇ ಪ್ರಾರ್ಥನೆ: "ಹೇ ಭಗವಂತ, ನಿಶ್ಚಿಂತನಾಗಿ ಕುಳಿತು ರಾಮನಾಮವನ್ನು ಜಪಿಸಲು ಯಾವುದಾದರೂ ನಿರ್ಜನ ಪ್ರದೇಶದಲ್ಲಿ ನನಗೊಂದು ಸ್ಥಾನವನ್ನು ಕರುಣಿಸು." ಒಂದು ಸುದಿನ ಮನೆಯನ್ನು ತೊರೆದ. ಮತ್ತೆಂದೂ ತನ್ನ ಹುಟ್ಟೂರಿನ ಬಳಿ ಸುಳಿಯಲಿಲ್ಲ; ಪತ್ನಿಯನ್ನೂ ಇನ್ನೊಮ್ಮೆ ಕಾಣಲಿಲ್ಲ.

ಅವರ ಸಾಧನೆಯ ಬಗ್ಗೆ ಹೆಚ್ಚಾಗಿ ಮಾಹಿತಿಯಿಲ್ಲದಿದ್ದರೂ ಅವರ ಜೀವನ ಮಾತ್ರ ಅತಿ ಸರಳ. ಮೊದಮೊದಲು ದಿನಕ್ಕೊಂದು ಬಾರಿ ಭಿಕ್ಷೆಗೆ ಹೋಗುತ್ತಿದ್ದರು. ಸಿಕ್ಕಿದ ನಾಲ್ಕೈದು ರೊಟ್ಟಿಗಳನ್ನು ತಿಂದು ಸಂತೃಪ್ತರಾಗಿರುತ್ತಿದ್ದರು; ರಾತ್ರಿ ಏನನ್ನೂ ತಿನ್ನುತ್ತಿರಲಿಲ್ಲ. ಆಮೇಲೆ ಭಿಕ್ಷೆ ಬೇಡುವುದನ್ನೂ ಬಿಟ್ಟರು. ಯಾರಾದರೂ ಭಕ್ತರು ಇಲ್ಲವೆ ದಾರಿಹೋಕರು ಏನನ್ನಾದರೂ ಕೊಟ್ಟರೆ ಸ್ವೀಕರಿಸುತ್ತಿದ್ದರಷ್ಟೆ. ಸುಡುಬಿಸಿಲು, ಕೊರೆಯುವ ಚಳಿ—ಇವೆರಡೂ ವಿಪರೀತಗಳನ್ನವರು ಎಂದೂ ಲೆಕ್ಕಿಸಿದ್ದಿಲ್ಲ. ಎರಡೂ ಕಾಲಗಳಲ್ಲಿ ಅವರ ಮೇಮೇಲಿರುತ್ತಿದ್ದುದೆಂದರೆ ಅವರ ಕೌಪೀನ ಮಾತ್ರ. ಜನರು ಅವರನ್ನು "ನಂಗ್ಾ ಬಾಬಾ" (ಬೆತ್ತಲೆ ಸಾಧು) ಎಂದೇ ಕರೆಯುತ್ತಿದ್ದರು. ಅದ್ವೈತದ ಚರಮಗತಿಯನ್ನು ಮುಟ್ಟಿದ್ದ ಮಧುರಾದಾಸರು ಭಯ, ದ್ವೇಷ ಹಾಗೂ ಲಜ್ಜೆ—ಈ ಮೂರು ಗುಣಗಳನ್ನೂ ಮೀರಿದ್ದರು. ಕಂಖಲ್‌ನಿಂದ ತುಸು ದೂರದಲ್ಲಿನ ಸತೀಕುಂಡದ ಕಾಡೊಂದರಲ್ಲಿ ಪಾಳುಬಿದ್ದ ಒಂದು ಗುಡಿಸಲು ಇತ್ತು. ಅವರು ಮಲಗುತ್ತಿದ್ದುದು ಇಲ್ಲಿಯೆ. ನಿರ್ಜನ ಪ್ರದೇಶವಾದರೂ ಮಧುರಾದಾಸರಿಗೆ ಯಾವ ಕಾಡು ಪ್ರಾಣಿಗಳ ಭಯವಾಗಲಿ, ಕಳ್ಳಕಾಕರ ಭಯವಾಗಲಿ ಇರಲಿಲ್ಲ. ತಾನು ಯಾರ ಕೇಡನ್ನೂ ಬಯಸದಿರುವಾಗ ಯಾವುದೇ ಕಾಡು ಪ್ರಾಣಿಯಾಗಲಿ ವಿಷಜಂತುವಾಗಲಿ ತನಗೆ ಅನಿಷ್ಟವನ್ನುಂಟು ಮಾಡಲಾರವು ಎಂದವರು ಸ್ಪಷ್ಟವಾಗಿ ತಿಳಿದಿದ್ದರು.

ಒಂದು ಚಳಿಗಾಲದ ರಾತ್ರಿ. ಸತೀಕುಂಡದ ಗುಡಿಸಲಲ್ಲಿ ಬರಿಯ ನೆಲದ ಮೇಲೆ ಮಧುರಾದಾಸರು ಮಲಗಿದ್ದಾರೆ. ಇದನ್ನು ತಿಳಿದ ಭಕ್ತನೊಬ್ಬನು ಒಳ್ಳೆಯ ಕಂಬಳಿಯೊಂದನ್ನು ತಂದು ಅವರಿಗಾಗಿ ಹಾಸಿಕೊಟ್ಟನು. ಬಳಿಕ ಮಧುರಾದಾಸರು ಅದರ ಮೇಲೆ ಮಲಗಿದರು. ಮಧ್ಯರಾತ್ರಿಯ ಸಮಯ. ಯಾರೋ ಕಂಬಳಿಯನ್ನು ಎಳೆಯುತ್ತಿರುವಂತೆ ಮಧುರಾದಾಸರಿಗೆ ಭಾಸವಾಯಿತು. ಅವರು, "ಕಂಬಳಿಯನ್ನೇಕೆ ಎಳೆಯುತ್ತಿರುವೆ? ಅದು ಹರಿದುಹೋಗುವುದಿಲ್ಲವೆ? ಸ್ವಲ್ಪ ತಾಳು. ನಾನು ಸರಿಯುತ್ತೇನೆ. ಆಗ ನೀನದನ್ನು ತೆಗೆದುಕೊಂಡು ಹೋಗಬಹುದು," ಎನ್ನುತ್ತ ಅಲ್ಲೇ ಕೊಂಚ ಸರಿದುಕೊಂಡರು. ಕಳ್ಳನು ಕಂಬಳಿಯನ್ನು ತೆಗೆದುಕೊಂಡು ಮಾಯವಾದನು. ಮಧುರಾದಾಸರೀಗ ನಿರಾತಂಕದಿಂದ

ನಿದ್ರೆಗೈದರು. ಮರುದಿನ ಬೆಳಗ್ಗೆ ಕಂಬಳಿಯನ್ನು ಕೊಟ್ಟ ಭಕ್ತ ಬಂದು ನೋಡುತ್ತಾನೆ, ಮಥುರಾದಾಸರು ಬರಿಯ ನೆಲದ ಮೇಲೆ ಮಲಗಿದ್ದಾರೆ! "ನಂಗ್ಬಾ, ಬಾಬಾ, ಕಂಬಳಿ ಎಲ್ಲಿ?"ಎಂದು ಕೇಳಿದಾಗ, "ಓಹೋ, ಅದೋ! ಕಳ್ಳನು ತೆಗೆದುಕೊಂಡು ಹೋದನು" ಎಂದುತ್ತರಿಸಿದರು ಮಗುವಿನಂತೆ. ಭಕ್ತನು ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿದಾಗ ಅವರು, "ಮಗು, ನನಗೆ ಕಂಬಳಿಯನ್ನು ಕೊಡಲು ನಿನಗೆ ಯಾರು ತಾನೆ ಹೇಳಿದರು? ನಾನೇನು ನಿನ್ನ ಕಂಬಳಿಯನ್ನು ಕಾಯಲೆ? ಕಳ್ಳನು ಅದನ್ನು ತೆಗೆದುಕೊಂಡು ಹೋದರೇನಾಯಿತು? ನಾನಂತೂ ಮೊದಲಿನಂತೆ ಸುಖವಾಗಿಯೆ ನಿದ್ರಿಸಿದೆ," ಎನ್ನುತ್ತ ನಿರ್ಲಿಪ್ತರಾಗಿ ಹೊರನಡೆದರು.

ಒಂದು ಸಲ ಗಂಗಾಸ್ನಾನವನ್ನು ಮುಗಿಸಿ ಬರುತ್ತಿದ್ದಾಗ, ಇವರನ್ನು ನೋಡಿದ ಕೆಲವರು, ಮಹಾತ್ಮರಿಂದ ಆಶೀರ್ವಾದ ಪಡೆಯಬೇಕೆಂಬ ಆಸೆಯಿಂದ ಇವರ ಬಳಿ ಸಾರಿದರು. ಪ್ರತಿಷ್ಠೆ ಮಾನ್ಯತೆಗಳನ್ನು ಒಲ್ಲದ ಮಥುರಾದಾಸರು ಜನರಿಂದ ತಪ್ಪಿಸಿಕೊಳ್ಳಲು ಓಡತೊಡಗಿದರು. ಜನರ ಗುಂಪು ಕೂಡ ಇವರನ್ನು ಹಿಂಬಾಲಿಸಿತು. ಕೊನೆಗೆ ಗುಂಪಿನಲ್ಲಿದ್ದ ಒಬ್ಬಾತನು ಮಥುರಾದಾಸರನ್ನು ಹಿಡಿಯಲೆಂದು ಕೈಚಾಚಿದಾಗ ಅವರ ಸೊಂಟಕ್ಕೆ ಬಿಗಿದಿದ್ದ ದಾರವು ಅವನ ಕೈಗೆ ಸಿಕ್ಕಿ ತುಂಡಾಗಿ ಹೋಯಿತು; ಅವರ ಕೌಪೀನವು ಕಳಚಿಕೊಂಡಿತು. ಆದರೂ ಮಥುರಾದಾಸರು ಮಾತ್ರ ಅದನ್ನು ಗಣನೆಗೆ ತಂದುಕೊಳ್ಳಲೇ ಇಲ್ಲ. ನೇರವಾಗಿ ಕಂಖಲ್ ಸೇವಾಶ್ರಮಕ್ಕೆ ಬಂದಾಗ ಅವರ ಅವಸ್ಥೆಯನ್ನು ಕಂಡ ಸ್ವಾಮಿ ಕಲ್ಯಾಣಾನಂದರು ಅವರಿಗಾಗಿ ಕೌಪೀನವನ್ನು ಹೊಲಿದುಕೊಡುವುದಾಗಿ ಹೇಳಿದಾಗ, ಸರಳವಾಗಿ ನುಡಿದರು: "ಬಟ್ಟೆ ಮೂರು ಅಂಗುಲವಿರಬೇಕು ಅಷ್ಟೆ. ಹೆಚ್ಚಿಗೆ ಬೇಡ."

ಮತ್ತೊಂದು ಸಲ ಸೇವಾಶ್ರಮದ ಸಾಧುಗಳು ಕೆಲವರು ಗಂಗಾಸ್ನಾನಕ್ಕೆಂದು ಹೋಗುತ್ತಿದ್ದರು. ದಾರಿಯಲ್ಲಿ ಮಥುರಾದಾಸರನ್ನು ಕಂಡಾಗ ಅವರು ಸ್ನಾನಕ್ಕೆ ಬರುವುದಿಲ್ಲವೇ ಎಂದು ಕೇಳಿದರು. "ಗಂಗೆಯಲ್ಲಿ ಏನಿದೆ? ಗಂಗಾಜಲ, ನನ್ನ ಮೂತ್ರ—ಎರಡೂ ಒಂದೇ—ಯಾವ ಭೇದವೂ ಇಲ್ಲ. ಸಚ್ಚಿದಾನಂದವನ್ನರಿತುಕೊ. ಅದೊಂದೇ ಸತ್ಯ ಉಳಿದುವೆಲ್ಲ ಮಿಥ್ಯೆ" ಎಂದು ಅವರು ಉತ್ತರವಿತ್ತರು.

ಭಕ್ತರೋರ್ವರು ಅವರನ್ನು ಕುರಿತು, "ನೀವು ಇಷ್ಟು ಉನ್ನತ ಸ್ಥಿತಿಯನ್ನು ಪಡೆದುದು ಹೇಗೆ? ಬಹಳವಾಗಿ ಜಪ-ತಪಸ್ಸುಗಳನ್ನು ಮಾಡಿರಬೇಕಲ್ಲವೆ?" ಎಂಬ ಕುತೂಹಲ ವ್ಯಕ್ತಪಡಿಸಿದಾಗ, ಬಹು ವಿನಯದಿಂದ ಮಥುರಾದಾಸರೆಂದರು: "ಎಲ್ಲಿ ನಾನಂಥದ್ದೇನೂ ಮಾಡಿಲ್ಲವಲ್ಲ! ಇದನ್ನು 'ಉನ್ನತ ಸ್ಥಿತಿ' ಎನ್ನುತ್ತೀರೇನು? ಇವೆಲ್ಲ ಏನೂ ಇಲ್ಲ. ನಾನು ಸುಮ್ಮನೆ ಬೀದಿ-ಬೀದಿ ಅಲೆಯುತ್ತೇನೆ ಅಷ್ಟೆ" ಎಂದರು. ಲೌಕಿಕ ಆಚರಣೆಗಳು, ಸಾಂಪ್ರದಾಯಿಕ ವಿಧಿ ನಿಯಮಗಳನ್ನು ಮೀರಿನಿಂತ ಪರಮಜ್ಞಾನಿಗಳಿವರು. ಆದ್ದರಿಂದಲೆ ಯಾವ ಬಂಧನವೂ ಇವರಿಗಿರಲಿಲ್ಲ. ಸಾಧಾರಣರಂತಿದ್ದ ಮಥುರಾದಾಸರೊಂದಿಗೆ ಕೆಲವೇ ಮಾತುಗಳನ್ನಾಡಿದವರೂ ಇವರಿಂದ ಪ್ರಭಾವಿತರಾಗುತ್ತಿದ್ದರು. ಯಾರಾದರೂ ಇವರನ್ನು ತಾವು ಯಾವ ಪಂಥಕ್ಕೆ ಸೇರಿದವರೆಂದು ಪ್ರಶ್ನಿಸಿದರೆ ಇವರೆನ್ನುತ್ತಿದ್ದರು : "ನಾನು ಯಾವ ಪಂಥಕ್ಕೂ ಸೇರಿಲ್ಲ. ಪಂಥ-ಗ್ರಂಥ ಇವುಗಳೆಲ್ಲಾ ಸುಳ್ಳು. ನಾನು ಶಿವಪುರಿಯೂ ಅಲ್ಲ, ಸಂನ್ಯಾಸಿಯೂ ಅಲ್ಲ. ನನ್ನ ಬಾಲ್ಯದ ಹೆಸರು ಮಥುರಾದಾಸ ಎಂದು. ಆ ಹೆಸರಿನಿಂದಲೇ ನಾನೆಲ್ಲರಿಗೂ ಪರಿಚಿತ. ನಾನು ಯಾವ ಪಂಥವನ್ನೂ ಹಿಡಿದಿಲ್ಲ. ನನಗೆ ತಿಳಿದಿರುವುದು ಒಂದೇ ವಿಷಯ. ಅದೇ ಸಚ್ಚಿದಾನಂದ."

"ಮಥುರಾದಾಸರೆ, ಮುಕ್ತಪುರುಷರು ಹೇಗಿರುತ್ತಾರೆ? ಅವರ ಲಕ್ಷಣಗಳೇನು?" ಎಂದು ಅವರನ್ನು ಸಾಧುಗಳೊಬ್ಬರು ಕೇಳಿದ ತಕ್ಷಣ ಮಥುರಾದಾಸರು ನೆಟ್ಟ ದೃಷ್ಟಿಯುಳ್ಳವರಾದರು. ಕಣ್ಣುಗಳು ಪ್ರಕಾಶಮಾನವಾಗಿ ಯಾವುದೊ ಜ್ಯೋತಿಯು ಹೊರಹೊಮ್ಮುವಂತಿದ್ದುವು. ಅವರು ಉತ್ತರಿಸಿದರು : "ಮನುಷ್ಯನಿಗೆ ಮೂರು ಬಂಧನಗಳಿವೆ. ಮೊದಲನೆಯದು, ಸಮಾಜ-ಬಂಧನ. ಒಬ್ಬ ವ್ಯಕ್ತಿಯ ಕಾರ್ಯಗಳು ಇತರರ ಮನ್ನಣೆ-ನಿಂದನೆಗಳಿಗೆ ಅನುಗುಣವಾಗಿರುತ್ತವೆ. ಸಮಾಜ-ಬಂಧನವನ್ನು ಮೀರುವುದು ಕಷ್ಟ. ಎರಡನೆಯ ಬಂಧನವೆಂದರೆ, ಶಾಸ್ತ್ರ-ಬಂಧನ. ಶಾಸ್ತ್ರಗಳೇನು ಹೇಳುತ್ತವೆ, ಯಾವ ವಿಧಿಗಳನ್ನು ನಾವು ಅನುಸರಿಸತಕ್ಕದ್ದು, ಶಾಸ್ತ್ರಗಳು ಏನನ್ನು ನಿಷೇಧಿಸಿವೆ ಎನ್ನುವುದು. ಶಾಸ್ತ್ರ ನಿಯಮಗಳು ಪರ್ವತದಂತೆ ಬೆಳೆದು ನಿಂತು ವ್ಯಕ್ತಿಯ ತಲೆಯನ್ನು ಅದುಮುತ್ತಿವೆ. ಆದರೆ ಸಾಮಾನ್ಯವ್ಯಕ್ತಿಯು ಶಾಸ್ತ್ರಗಳನ್ನು ಮೀರಿ ನಿಲ್ಲಲಾರ. ಮೂರನೆಯ ಬಂಧನವೇ ಗುರು-ಬಂಧನ. ಗುರುವಿನ ವಾಕ್ಯವನ್ನು ಉಲ್ಲಂಘಿಸಲು ಯಾವ ಶಿಷ್ಯನಿಂದಲೂ ಸಾಧ್ಯವಿಲ್ಲ. ಎಲ್ಲರೂ ಗುರುವಿನ ವ್ಯಕ್ತಿತ್ವಕ್ಕೆ ಆಕರ್ಷಿತರಾಗಿರುತ್ತಾರೆ. ಪ್ರತಿಯೊಬ್ಬನ ಒಳಗೂ ಪರಮಾತ್ಮನಿದ್ದಾನೆ. ಆದರೆ, ಈ ಪರಮಾತ್ಮನನ್ನು ಅರಿತುಕೊಳ್ಳಲು ಯಾರೂ ಹೊರಡುವುದಿಲ್ಲ. ಗುರುವನ್ನು ಸ್ತುತಿಸುತ್ತ ಆಯುಷ್ಯವು ಕಳೆಯುತ್ತದೆ, ಆತ್ಮವಿಕಾಸದೆಡೆಗೆ ಸಾಗುವವರು ಅತಿ ವಿರಳ. ಇದೊಂದು ಭಯಂಕರ ಬಂಧನವೇ ಸರಿ. ಯಾವನು ಈ ಮೂರು ಬಂಧನಗಳನ್ನು ಕತ್ತರಿಸಿಕೊಳ್ಳುವನೊ ಅವನೇ ಮುಕ್ತ ಪುರುಷ" .

ಮಥುರಾದಾಸರಿಗೆ ಲೌಕಿಕ ವಿದ್ಯಾಭ್ಯಾಸವು ಅಷ್ಟಾಗಿ ಇರದಿದ್ದರೂ ಅನೇಕ ಮೇಧಾವಿ ಪಂಡಿತರ ಜಟಿಲವಾದ ಸಂಶಯಗಳನ್ನು ಸುಲಭರೀತಿಯಲ್ಲಿ ಬಗೆಹರಿಸುತ್ತಿದ್ದರು. ಅತಿ ಸಾಮಾನ್ಯ ವ್ಯಕ್ತಿಯಂತೆ ಕಂಡರೂ ಅವರ ನುಡಿಗಳು ಅರ್ಥಗರ್ಭಿತವಾಗಿಯೂ ಇತರ ಪಂಡಿತರ ಮಾತುಗಳಿಗಿಂತ ಅತ್ಯಂತ ಭಿನ್ನವಾಗಿಯೂ, ಸತ್ಯದ್ರಷ್ಟರ ಸಾಲಿಗೆ ಅವರನ್ನು ಸೇರಿಸುವಂತೆಯೂ ಇದ್ದುವು. ತಮ್ಮ ಅಂತಿಮ ಕಾಲದಲ್ಲಿ, ಡಬಲ್ ನಿಮೋನಿಯಾದಿಂದಾಗಿ ಅತಿ ಜ್ವರದಿಂದ ತಪಿತರಾಗಿದ್ದಾಗಲೂ ಕೂಡ ಅವರ ಸೇವೆಗಾಗಿ ಬಂದ ಕಂಖಲ್ ರಾಮಕೃಷ್ಣ ಸೇವಾಶ್ರಮದ ಸಾಧುಗಳಿಗೆ ಸಂಪೂರ್ಣ ನಿರ್ಲಿಪ್ತತೆಯಿಂದ ಹೇಳಿದರು : "ನನ್ನ ಶರೀರಕ್ಕೆ ಏನೂ ಆಗಿಲ್ಲ. ಶರೀರದ ಬಗ್ಗೆ ಚಿಂತಿಸಬೇಡಿ." ಸಚ್ಚಿದಾನಂದವೊಂದೆ ಸತ್ಯ, ಮಿಕ್ಕವೆಲ್ಲ ಮಿಥ್ಯೆ ಎಂಬುದನ್ನು ಅವರ ಜೀವನದ ಪ್ರತಿಯೊಂದು ಘಟನೆಯೂ ಸಾರುತ್ತಿತ್ತು. ❋